**ಪಾಠ–7** *ಆಗಸ್ಟ್ 11–17

# ಪೌಲನ ಮೊದಲನೆಯ ಸುವಾರ್ತಾ ಪಯಣ



**ಸಬ್ಬತ್ತಿನ ಮಧಾಹ್ನ**

**ಈ ವಾರದ ಅಧ್ಯಾಯನಕ್ಕಾಗಿ ಓದಿರಿ:** ಅ.ಕೃ.13:2, 2ಕೊರಿ. 4:7–10, ರೋಮಾ. 3:19, ಅ.ಕೃ. 14:1–26, ರೋಮಾ. 9:11

**ಸ್ಮರಣವಾಕ್ಯ:– "ಆದದರಿಂದ ಸಹೋದರರೇ, ಆತನ ಮೂಲಕವಾಗಿ ಪಾಪಪರಿಹಾರವು ದೊರೆಯುತ್ತದೆಂಬದು ನಿಮಗೆ ಸಾರೋಣವಾಗುತ್ತದೆಂದು. ನಿಮಗೆ ತಿಳಿದಿರಲಿ. ಮೋಶೆಯಧರ್ಮಶಾಸ್ತ್ರದ ಮೂಲಕ ನೀವು ಬಿಡುಗಡೆ ಹೊಂದಲಾಗದ ಎಲ್ಲಾ ಪಾಪಗಳಿಂದ ನಂಬುವವರೆಲ್ಲರೂ ಆತನ ಮೂಲಕವಾಗಿ ಬಿಡುಗಡೆ ಹೊಂದಿ ನೀತಿವಂತರೆನಿಸಿಕೊಳ್ಳುತ್ತಾರೆ."** (*ಅ.ಕೃ. 13:38–39*)

ನಿಶ್ಚಯವಾಗಿ ಸುವಾರ್ತೆಯು ಅನ್ಯನಜನಾಂಗಕ್ಕೆ ಆದರೆ ಖಂಡಿತವಾಗಿ ಮೊದಲಿನ ಯೆಹೂದ್ಯೆ ಕ್ರೈಸ್ತರು ಗ್ರಹಿಸಿಕೊಳ್ಳಲು ಪ್ರಾರಂಭಿಸಿದರು.

ಅನ್ಯ ಜನರು ಬಹು ಸಂಖ್ಯೆಯಲ್ಲಿ ನಂಬಿಕೆಯಲ್ಲಿ ಒಂದಾಗಿದ್ದು ಸ್ಪಷ್ಟವಾದ ವರದಿಯು ಅಂತಿಯೋಕ್ಯಕ್ಕೆ ಸಂಬಂಧ ಪಟ್ಟಿದ್ದಾಗಿದೆ. ಹಾಗಾಗಿ ಅಂತಿಯೋಕ್‌ದಲ್ಲಿಯೇ ಅನ್ಯಜನರ ಮೊದಲನೆಯ ಸಭೆಯನ್ನು ಸ್ಥಾಪಿಸಲಾಯಿತು. ಸುವಾರ್ತೆ ಸೇವೆಯಲ್ಲಿ ಸಭೆಯನ್ನು ಸ್ಥಾಪಿಸಿದವರಿಗೆ ಆಸಕ್ತಿ ಇದ್ದುದರಿಂದ ಬಾರ್ನಬನು ಮತ್ತು ಪೌಲನು ಅವರಲ್ಲಿ ಬಂದು ಸೇರಿರುವುದು ಅವರಿಗೆ ಪ್ರೇರಣೆ ನೀಡಿತು ಹಾಗಾಗಿ ಸಭೆಯು ಅತಿವೇಗವಾಗಿ ಬೆಳೆದು ಅದು ಯೂದಾಯದ ಹೊರಗೆ ಮೊದಲ ಮುಖ್ಯವಾದ ಕ್ರೈಸ್ತ ಕೇಂದ್ರವಾಯಿತು. ಕೆಲವೊಂದು ವಿಷಯಗಳಲ್ಲಿ ಯೆರೂಸಲೇಮಿನ ಸಭೆಯನ್ನು ಹಿಂದಕ್ಕೆ ಹಾಕಿತು. ಅಪೊಸ್ತಲರು ಇನ್ನು ಯೆರೂಸಲೇಮಿನಲ್ಲೇ ಉಳಿದುಕೊಂಡ ಕಾರಣ ಅಂತಿಯೋಕ್ಯ ಕ್ರೈಸ್ತರ ಉಗಮ ಸ್ಥಳವಾಯಿತು. ಸ್ಥಳೀಯ ನಂಬಿಗಸ್ತರ ಬೆಂಬಲದಿಂದ ಅಲ್ಲಿಂದ ಪೌಲನು ಉಳೀದ ಮೂರು ಸುವಾರ್ತಾ ಪಯಣವನ್ನು ಕೈಗೊಂಡನು. ಅವರ ಸೇವೆಯಿಂದ ಕ್ರಿಸ್ತನು ಯೋಚಿಸಿದ ಹಾಗೆ ಕ್ರೈಸ್ತಧರ್ಮವು ವಿಶ್ವಧರ್ಮವಾಯಿತು. ವಿಶ್ವದ ಎಲ್ಲ ದೇಶಗಳಿಗೂ ಸಕಲ ಜನಾಂಗ ಕುಲ ಪ್ರಜೆಗಳವರಿಗೂ ಸಕಲ ಭಾಷೆಗಳನ್ನಾಡುವವರಿಗೆ ಸಾರಿ ಹೇಳುವದಕ್ಕೆ.

**ಭಾನುವಾರ** **ಆಗಸ್ಟ್–12**

## ಸಲಮೀಸ್ ಮತ್ತು ಪಾಫೋಸ್

ಅ.ಕೃ. 13ನೇ ಅಧ್ಯಾಯದಲ್ಲಿ ಲೂಕನು, ಪೌಲನ ಮೊದಲ ಸುವಾರ್ತಾ ಪಯಣವನ್ನು ಪರಿಚಯಿಸಲು ಅಂತಿಯ–ೋಕ್ಯದ ಬಗ್ಗೆ ಮತ್ತೆ ಬರೆಯುತ್ತಿದ್ದಾನೆ. ಸುವಾರ್ತಾ ಪಯಣದ ಬಗ್ಗೆ ಎರಡು ಅಧ್ಯಾಯಗಳಲ್ಲಿ *ಅ.ಕೃ. 13,14*ರ ಕೊನೆಯವರೆಗೂ ಪೌಲ ಮತ್ತು ಅವನು ಅನ್ಯಜನಕ್ಕೆ ಧರ್ಮಪ್ರಚಾರ ಮಾಡಿದ ಕಾರ್ಯದ ಬಗ್ಗೆ ಬರೆದಿದೆ.

ಅ.ಕೃ.ಗಳಲ್ಲಿ ಒಂದು ಮಾಡಿರುವ ಸುವಾರ್ತಾ ಪ್ರಯತ್ನ ನಂಬಿಗಸ್ತರಿಂದಲ್ಲ, ಆದರೆ ಆ ದೇವರಲ್ಲಿ ಈ ಆಲೋಚನೆಯೂ ಉದ್ಭವವಾಯಿತು ಎಂದು ಲೂಕನು ಜಾಹಿರಾತೆಯಿಂದ ಒತ್ತಿ ಹೇಳುತ್ತಾನೆ. ಇಲ್ಲಿ ವಿಷಯವೇನೆಂದರೆ ನಾವು ಸಿದ್ದರಾಗಿ ದೇವರ ಕೈಯಲ್ಲಿ ನಮ್ಮನ್ನೂ ಆತನ ಕಾರ್ಯಗೈಯ್ಯಲು ಒಪ್ಪಿಸಿಕೊಡುವುದಾದರೆ ನಮ್ಮನ್ನು ಆತನ ಕಾರ್ಯಕ್ಕೆ ಉಪಯೋಗಿಸುತ್ತಾನೆ.

**ಅ.ಕೃ 13:1–12 ರವರೆಗೆ ಓದಿರಿ. ಕುಪ್ರ ದ್ವೀಪದಲ್ಲಿ ಬಾರ್ನಬ ಮತ್ತು ಪೌಲನ ಯಾವ ಕಾರ್ಯಚಟುವಟಿಕೆಯ ಬಗ್ಗೆ ಒತ್ತಿ ಹೇಳುತ್ತಾರೆ?**

---

ಸುವಾರ್ತೆ ಸೇವಕರು ಹೊರಡುವ ಮುನ್ನ ಉಪವಾಸವಿದ್ದು ಪ್ರಾರ್ಥಿಸುತ್ತಿದ್ದರು. ಆ ಸಂದರ್ಭದಲ್ಲಿ ಹಸ್ತಾರ್ಪಣ ಮಾಡುವುದು ದೇವರ ಕಾರ್ಯಕ್ಕೆ ಸಮರ್ಪಣೆ ಮಾಡಿರುವುದನ್ನು ಸೂಚಿಸುತ್ತದೆ. ಅಥವಾ ಕೆಲಸಕ್ಕಾಗಿ ದೇವರ ಕೃಪೆಯ ಪ್ರಶಂಸೆಮಾಡಿದೆವೆ.

ಸಮುದ್ರದ ಉತ್ತರ ಪೂರ್ವದ ಮೂಲೆಯಲ್ಲಿ ಕುಪ್ರ ದ್ವೀಪವಿದೆ ಅದು ಅಂತಿಯೋಕ್ಯದಿಂದ ದೂರವಿಲ್ಲ. ಸುವಾರ್ತೆ ಸೇವೆಗೆ ಒಳ್ಳೆಯ ಸ್ಥಳವಾಗಿತ್ತು. ಬಾರ್ನಬನು ಅಲ್ಲಿಗೆ ಹೋಗುವುದಲ್ಲದೆ ಶುಭವಾರ್ತೆಯು ಆಗಲೇ ಆ ದ್ವೀಪಕ್ಕೆ ತಲುಪಿತು. ಆದರೂ ಇನ್ನೂ ಮಾಡಬೇಕಾದದ್ದು ಇತ್ತು.

ಒಂದು ಸಲ ಕುಪ್ರದಲ್ಲಿ ಬಾರ್ನಬನು, ಪೌಲನು ಮತ್ತು ಯೋಹಾನ ಮತ್ತು ಮಾರ್ಕನು ಜೊತೆಯಾಗಿ ಸಲಾಮಿಸಿನ ಸಭಾಮಂದಿರಗಳಲ್ಲಿ ಶುಭವಾರ್ತೆಸಾರಿದರು. ಅನ್ಯಜನರಕಡೆಗೆ ತಿರುಗುವ ಮುನ್ನ ಪೌಲನಿಗೆ ಅಲ್ಲಿಯ ಸಭಾಮಂದಿರಗಳಲ್ಲಿ ಬೋಧಿಸುವುದು ಅಭ್ಯಾಸವಾಗಿತ್ತು, ಏಕೆಂದರೆ ಯೇಸು ಇಸ್ರಾಯೇಲ್ಯರ ರಕ್ಷಕನಾಗಿದ್ದನು ಆದುದರಿಂದ ಮೊದಲ ಯಹೂದ್ಯರಿಗೆ ಶುಭವಾರ್ತೆಯನ್ನು ತಿಳಿಸುವದು ಸಹಜವಾಗಿತ್ತು.

ಸಲಾಮಿಸಿನಿಂದ ಅವರು ಪಶ್ಚಿಮದ ಕಡೆಗೆ ಸುವಾರ್ತೆ ಸಾರಲು ದ್ವೀಪದಲ್ಲೆಲ್ಲಾ ಸಂಚಾರಮಾಡಿ ಅವರು ರಾಜಧಾನಿಯಾದ ಪಾಫೋಸ್‌ಗೆ ಬಂದರು. ಇಲ್ಲಿ ಎರಡು ವ್ಯಕ್ತಿಗಳ ಬಗ್ಗೆ ತಿಳಿಸಲಾಗಿದೆ.. ಒಂದು ಸುಳ್ಳು ಪ್ರವಾದಿಯೂ ಮಂತ್ರವಾದಿಯಾದ ಬಾರ್–ಯೇಸು ಅವನು ಎಲುಮನೆಂದು ಗುರುತಿಸಿಕೊಂಡಿದ್ದ, ಮತ್ತೊಬ್ಬ ವ್ಯಕ್ತಿ ಸೆರ್ಗಪೌಲನೆಂಬ ಸ್ಥಳೀಯ ರೋಮನ್ ಅಧಿಪತಿಯು. ಈ ಕಥೆಯು ಒಂದು ಒಳ್ಳೆಯ ಉದಾರಣೆಯಾಗಿದೆ ಹೇಗೆ ಶುಭವಾರ್ತೆಯನ್ನು ಕೆಲವರು ನಿರಾಕರಿಸಿದರು ಮತ್ತು ಕೆಲವರು ಸ್ವೀಕರಿಸಿದರೆಂಬದರ ಬಗ್ಗೆ ಅನ್ಯಜನರಲ್ಲಿ ಗಣ್ಯವ್ಯಕ್ತಿಗಳು ಹೇಗೆ ಸುವಾರ್ತೆಯನ್ನು ಸ್ವೀಕರಿಸಿದರೆಂಬುದರ ಬಗ್ಗೆ ತಿಳಿಸಿದೆ. ಅ.ಕೃ.13:12 ಪರಿವರ್ತನೆಯ ಬಗ್ಗೆ ಸೂಚಿಸಿದೆ.

**ಈ ಸನ್ನಿವೇಶದಲ್ಲಿ ಯಹೂದ್ಯರು ಸತ್ಯವನ್ನು ಸ್ವೀಕರಿಸದೆ ತಡೆದರು, ಆದರೆ ಅನ್ಯಜನರು ಹೇಗೆ ಸ್ವೀಕಾರ ಮಾಡಿದರು ಎಂಬುದರ ಬಗ್ಗೆ ಯೋಚಿಸಿ, ಇದು ಅರ್ಥಮಾಡಿಕೊಳ್ಳಲು ಸಹಾಯವಾಗಬಹುದು ಕೆಲವೊಮ್ಮೆ ಏಕೆ ಕ್ರೈಸ್ತರು ಬೇರೆ ಪಂಗಡದವರಿಗೆ ಸತ್ಯವನ್ನು ಮುಟ್ಟಿಸಲು ಕಷ್ಟವಾಗಿದೆ ಆದರೆ ನಂಬಿಯಿರುವವರಿಗೆ ಸತ್ಯವನ್ನು ಮುಟ್ಟಿಸಲು ಕಷ್ಟವೆನಿಸದು ಎಂಬುದು?**

**ಸೋಮವಾರ** **ಆಗಸ್ಟ್–13**

## ಪಿಸಿದ್ಯದ ಅಂತಿಯೋಕ್ಯ–ಭಾಗ–1

ಕುಪ್ರದಿಂದ ಪೌಲನು ಮತ್ತು ಆತನ ಜೊತೆಗಾರರು ಪೆರ್ಗಾಗೆ ಬಂದರು, ದಾಂಪಿಲಿಯ ಆಧುನಿಕ ಟರ್ಕಿಯ ದಕ್ಷಿಣ ಕರಾವಳಿ ಪ್ರದೇಶ. ಪಿಸಿದ್ಯದ ಅಂತಿಯೋಕ್ಯಕ್ಕೆ ಹೋಗುವ ಮುನ್ನ ಲೂಕನು ಎರಡು ವ್ಯತ್ಯಾಸವಾದ ಬದಲಾವಣೆಗಳ ಬಗ್ಗೆ ವರದಿ ಮಾಡುತ್ತಾನೆ. ಪೌಲನು ಗುರುತಿಕೊಂಡು ಮುನ್ನಡೆಯಲ್ಲಿದ್ದ ವ್ಯಕ್ತಿಯಾಗುತ್ತಾನೆ (ಅಲ್ಲಿಯವರೆಗೂ ಬಾರ್ನಬನ ಬಗ್ಗೆ ಮೊದಲು ತಿಳಿಸಲಾಗುತ್ತಿತ್ತು) ಮತ್ತು ಲೂಕನು ಪೌಲನ ಯೆಹೂದ್ಯದ ಹೆಸರಾದ "ಸೌಲ" ಎಂಬುದನ್ನು ಉಪಯೋಗಿಸುದನ್ನು ನಿಲ್ಲಿಸುತ್ತಾನೆ ಮತ್ತು ಪೌಲನಾವಾದೇವವನ್ನೂ ಉಪಯೋಗಿಸಲು ಪ್ರಾರಂಭಿಸುತ್ತಾನೆ. ಅಲ್ಲಿಂದ ಪೌಲನು ಗ್ರಿಕ್–ರೋಮ ವಾರ್ತಾವರಣದಲ್ಲಿ ಯಾವಾಗಲೂ ಕಾಣಿಸಿಕೊಳ್ಳುತ್ತಾನೆ.

ಅ.ಕೃ.13:13ರಲ್ಲಿ ಯೋಹಾನನು ಮತ್ತು ಮಾರ್ಕನು ಮತ್ತೆ ಯೆರೂಸಲೇಮಿಗೆ ಹಿಂದಿರುಗಿದರು ಎಂದು ಬರೆದಿದೆ, ಆ ವಾಕ್ಯಗಳಲ್ಲಿ ಏಕೆ ಮಾರ್ಕನು ಮತ್ತು ಯೋಹಾನನು ಹಿಂದಿರುಗಿದರು ಎಂಬುದರ ಬಗ್ಗೆ ಮಾಹಿತಿ ಇಲ್ಲ.
ಅವರು ಮುಂಬರುವ ಕಷ್ಟಗಳ ಕಾರಣ ಭಯಪಟ್ಟು ಎದೆಗುಂದಿದರು ಮಾರ್ಕನಿಗೆ ಬೆದರಿಕೆ ಹಾಕಲಾಯಿತು ಆದುದರಿಂದ ಧೈರ್ಯಗೆಟ್ಟು ಮುಂದೆ ಹೋಗಲು ನಿರಾಕರಿಸಿ ಯೆರೂಸಲೇಮಿಗೆ ಹಿಂದಿರುಗಿದವನು ಎಂದು ಎಲೆನ್.ಜಿ.ವೈಟ್. *"ದಿ ಆಕ್ಟ್ಸ್ ಆಫ್ ದಿ ಆಪೊಸ್ಟಲ್ಸ್"* ಎಂಬ ಪುಸ್ತಕದಲ್ಲಿ ಪುಟ 170ರಲ್ಲಿ ಬರೆದಿದ್ದಾರೆ. ದೇವರು ಎಲ್ಲಾ ವಾಗ್ಧಾನ ಕೆಲಸ

ಸುಲಭವಾಗಿರುತ್ತದೆಂದು ಮಾಡಿಲ್ಲ. ಆದರೆ ವಿರುದ್ಧವಾಗಿ ಪೌಲನಿಗೆ ಮೊದಮೊದಲು ಯೇಸುವಿಗೋಸ್ಕರ ಮಾಡುವ ಕೆಲಸ ಅನೇಕ ಹಿಂಸೆ ಎದುರಿಸಬೇಕಾಗುತ್ತದೆಂಬುದರ ಅರಿವಾಯಿತು (*ಅ.ಕೃ.9:16*) ಆದರೆ ದೇವರ ಶಕ್ತಿಯ ಮೇಲೆ ಆತುಕೊಂಡಿದ್ದನು ಅದರಲ್ಲಿ ಅವನ ಬಲದ ರಹಸ್ಯವಿತ್ತು (*2 ಕೊರಿ. 4:7–10*)

**ಅ.ಕೃ. 13:38 ಓದಿರಿ. ಅಂತಿಯೋಕ್ಯದ ಸಭಾಮಂದಿರಗಳಲ್ಲಿ ಪೌಲನ ಸಂದೇಶದ ಸತ್ವ / ಅಂಶವು ಏನು?**

__________________________________________________________

__________________________________________________________

ಅ.ಕೃ. 13:16–41 ಪೌಲನ ಸಂದೇಶವನ್ನು ಹೊಸ ಒಡಂಬಡಿಕೆಯಲ್ಲಿ ಬರೆದಿದೆ. ಅದು ಪೌಲನ ಮೊದಲನೇ ಸಂದೇಶವಾಗಿರಲಿಲ್ಲ ಮತ್ತು ಪೌಲನು ಹೇಳಿದುದರ ಸಾರಾಂಶ ಎಂಬುದರ ಬಗ್ಗೆ ಯಾವ ಪ್ರಶ್ನೆಯೂ ಇಲ್ಲ. ಸಂದೇಶ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ, ಮೊದಲು ಇಸ್ರಾಯೇಲ್ಯರನ್ನು ಆರಿಸಿಕೊಂಡಿದ್ದು, ಎರಡನೇಯದು ದಾವೀದನ ರಾಜಪಟ್ಟದ ಬಗ್ಗೆ(*ಅ.ಕೃ.13:17–23*) ಈಭಾಗವು ಯೆಹೂದ್ಯದ ಜನರಿಗೆ ಇನ್ನೊಂದು ಅಂಶವು ಏನೆಂದರೆ, ದಾವೀದನ ವಂಶದಲ್ಲಿ ಯೇಸುವು ಹುಟ್ಟಿಬಂದು ಇಸ್ರಾಯೇಲ್ಯರಿಗೆ ರಕ್ಷಣೆ ನೀಡುವ ಎಂಬ ದೇವರ ವಾಗ್ದಾನವನ್ನು ನೆರವೇರಿಸಿತು (*ಅ.ಕೃ.13:24–37*) ಮುಕ್ತಾಯದ ಭಾಗವು ಯೇಸುವಿನ ಮೂಲಕ ಸಿಗುವ ರಕ್ಷಣೆಯನ್ನು ನಿರಾಕರಿಸಿದವರಿಗೆ ಎಚ್ಚರಿಕೆ ಕೊಡಲಾಗಿದೆ.

38–39 ವಾಕ್ಯಗಳಲ್ಲಿ ಸಂದೇಶದ ಕೊನೆಯ ಭಾಗದ ಪೌಲನ ಸಂದೇಶದ ತಿರುಳು ಏನೆಂದರೆ ಆತನ ಮೂಲಕವಾಗಿ ಪಾಪಪರಿಹಾರವು ದೊರೆಯುತ್ತದೆಂಬದು, ಮೋಶೆಯ ಧರ್ಮಶಾಸ್ತ್ರದ ಮೂಲಕ ನೀವು ಬಿಡುಗಡೆ ಹೊಂದಲಾಗದು ಎಲ್ಲಾ ಪಾಪಗಳಿಂದ ನಂಬುವವರೆಲ್ಲರೂ ಆತನ ಮೂಲಕವಾಗಿ ಬಿಡುಗಡೆ ಹೊಂದಿ ನೀತಿವಂತರರೆನಿಸಿಕೊಳ್ಳುತ್ತಾರೆ. ಈ ವಾಕ್ಯಗಳಲ್ಲಿ ಮೋಶೆಯು ಧರ್ಮಶಾಸ್ತ್ರವನ್ನು ರದ್ದುಮಾಡಲಾಗಿದೆ ಎಂದು ಹೇಳಿಲ್ಲ. ಯೆಹೂದ್ಯರ ಅಪೇಕ್ಷಪ್ರಕಾರ ಆ ಧರ್ಮಶಾಸ್ತ್ರದ ಅಸಮರ್ಥತೆಯ ಬಗ್ಗೆ ಒತ್ತಿ ಹೇಳಲಾಗಿದೆ (*ರೋಮ.10:1–4*) ಕ್ರಿಸ್ತನ ಮೇಲಿನ ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಡುವುದು (ಗಲಾ. 2:16).

**ಯೇಸುವಿನ ಮೂಲಕ ಮಾತ್ರವೇ ರಕ್ಷಣೆ ಎಂಬುದರ ಅರ್ಥವೇನು?**

**ಮಂಗಳವಾರ** **ಆಗಸ್ಟ್–14**

## ಪಿಸಿದ್ಯದ ಅಂತಿಯೋಕ್ಯ ಭಾಗ – 2

ಅ.ಕೃ.13:38,39 ಮೋಶೆಯ ಧರ್ಮಶಾಸ್ತ್ರದ ಅಸಮರ್ಥತೆಯು ಮುಖ್ಯವಾದ ತಾತ್ವಿಕ ವಿಚಾರ. ನೈತಿಕ ಆಜ್ಞೆಗಳಿಗೆ ಒಂದುಗೂಡಿಸುವ ಗುಣಗಳಿದ್ದರೂ ಧರ್ಮಶಾಸ್ತ್ರಕ್ಕೆ ಸಮರ್ಥನೆ ಮಾಡಲು ಅಸಮರ್ಥವಾಗಿದೆ ಮತ್ತು ಕೈಗೊಂಡು ನಡೆಯುವವರು ಸಂಪೂರ್ಣವಾದ ವಿಧೇಯತೆಯನ್ನು ತರುವುದಿಲ್ಲ. (*ಅ.ಕೃ. 15–16, ರೋಮ. 8:3*) ಧರ್ಮಶಾಸ್ತ್ರವು ಸಂಪೂರ್ಣ ವಿಧೇಯತೆಯನ್ನು ನಮ್ಮಲ್ಲಿ ತಂದರೂ ಅದು ನಮ್ಮ ಪಾಪಗಳನ್ನು ಪರಿಹಾರ ಮಾಡಲು ಸಾಧ್ಯವಿಲ್ಲ. ಹಾಗಾಗಿ ಇದರಿಂದ ಸಮರ್ಥನೆ ಸ್ವಲ್ಪವು ಮಾಡಲಾಗುವುದಿಲ್ಲ. ಯೇಸುವಿನ ನಂಬಿಕೆಯಲ್ಲಿ ಮಾತ್ರ ಅದು ಸಾಧ್ಯ ಯೋಗ್ಯರಲ್ಲದಿದ್ದರೂ ಆತನು ನಮಗೆ ಕೊಟ್ಟ ಉಡುಗೊರೆ. ನಮ್ಮ ಕ್ರೈಸ್ತನ ಜೀವನವಾಗಲೀ, ವಿಧೆಯತೆಯಾಗಲೀ ನಮಗೆ ರಕ್ಷಣೆ ತರುವುದಿಲ್ಲ.

**ಅ.ಕೃ.13:42–49 ಓದಿರಿ: ಹೇಗೆ ಸಭಾಮಂದಿರಗಳಲ್ಲಿ ಪೌಲನು ಸಂದೇಶವನ್ನು ಸ್ವಿಕಾರ ಮಾಡಲಾಯಿತು?**

__________________________________________________________

__________________________________________________________

__________________________________________________________

ಪೌಲನು ತನ್ನ ಸಂದೇಶವನ್ನು ಒರಟಾಗಿ ಮುಗಿಸಿದರೂ ಅನೇಕ ಸಭಾಮಂದಿರಗಳಲ್ಲಿ ಸ್ವೀಕರಿಸಿದರು ಹಾಗಾಗಿ ಮುಂದಿನ ಸಬ್ಬತ್ತಿನಂದು ಅಪಾರವಾದ ಬದಲಾವಣೆ ಸಭಿಕರಲ್ಲಿ ತಂದಿತು. ಶುಭ ಸಂದೇಶವನ್ನು ನಿರಾಕರಿಸುತ್ತಿದ್ದವರು ಯ–ೆಹೂದ್ಯದ ಸಭಾಮಂದಿರಗಳ ನಾಯಕರು ಅವರ ಕ್ರೂರ ಮನೋವೃತ್ತಿಗೆ ಕಾರಣ ಪೌಲನ ಮೇಲಿನ ಹೊಟ್ಟೆಕಿಚ್ಚು.

ಆಧುನಿಕ ಜಗತ್ತಿನ ಯೆಹೂದ್ಯ ಜೀವನ ಶೈಲಿ ಸಬ್ಬತ್ತು ಯಹೂದ್ಯಾಯರಿಗೆ ಬಲವಾದ ಆಕರ್ಷಣೆಯಾದವು, ಹಾಗಾಗಿ ಅನೇಕರು ಯೆಹೂದ್ಯ ಧರ್ಮಕ್ಕೆ ಮತಾಂತರವಾದರು. ಸುನ್ನತಿಯು ಒಂದು ಗಂಭೀರವಾದ ಅಡಚಣೆಯಾಗಿತ್ತು. ಅದು (ಅಸಂಸ್ಕೃತ) ಮತ್ತು ಅಸಹ್ಯಕರ ಪದ್ದತಿ ಎಂದು ಪರಿಗಣಿಸಲಾಗಿತ್ತು. ಆದಕಾರಣ ಅನ್ಯಜನರು ಮತಾಂತರವಾಗದೇ ಸಭಾಮಂದಿರಗಳಲ್ಲಿ ಬಂದು ದೇವರನ್ನು ಆರಾಧಿಸುತ್ತಿದ್ದರು. ಇವರನ್ನು ದೇವರಲ್ಲೂ ಭಯಭಕ್ತಿಯುಳ್ಳವರು ಮತ್ತು ಮತಾಂತರವಾದ ಅಂತಿಯೋಕ್ಯ ಸಭಾಮಂದಿರದವರು ಪೌಲನು ಸಂದೇಶವನ್ನು ಜನರಲ್ಲಿ ಪ್ರಚಾರವಾಗುವಂತೆ ಮಾಡಿದ್ದರಿಂದ ಅನೇಕ ಜನರು ಸೇರುತ್ತಿದ್ದರು. ಯೆಹೂದ್ಯರ ನಿಯಮಗಳನ್ನು ಅನುಸರಿಸದೆ ರಕ್ಷಣೆಯನ್ನೂ ಅನುಭವಿಸುವ ಸಾಧ್ಯವಾಗುವದರಿಂದ ಅನೇಕರನ್ನು ಆಕರ್ಷಿಸಿತು. ಇದು ಯೆಹೂದ್ಯರ ಹೊಟ್ಟೆಕಿಚ್ಚಿನ ಬಗ್ಗೆ ವಿವರಿಸಲು ಸಹಾಯಕವಾಗುತ್ತದೆ.

ದೇವರ ಶುಭಸಂದೇಶವನ್ನು ನಿರಾಕರಿಸಿ ಅವರು ದೇವರ ರಕ್ಷಣೆಯಿಂದ ತಮ್ಮನ್ನು ತಾವೇ ಬೇರ್ಪಡಿಸಿಕೊಂಡು ಆದರೆ ಪೌಲನು ಬಾರ್ನಬನು ಮುಕ್ತಗೊಳಿಸಿ ಅವರ ಪೂರ್ಣ ಗಮನವನ್ನು ತನ್ನ ರಕ್ಷಣೆ ಯೋಜನೆಯಲ್ಲಿ ಸೇರಿಸಿದಕ್ಕೆ ಹರ್ಷದಿಂದ ದೇವರನ್ನು ಕೊಂಡಾಡುತ್ತದ್ದ ಅನ್ಯ ಜನರ ಕಡೆಗೆ ಹರಿಸುವಂತೆ ಮಾಡಿದರು.

**ಬುಧವಾರ** **ಆಗಸ್ಟ್–15**

## ಇಕೋನ್ಯ

ಅಂತಿಯೋಕ್ಯದಲ್ಲಿ ಯೆಹೂದ್ಯ ನಾಯಕರ ಪ್ರೇರಣೆಯಿಂದ ಸ್ಥಳೀಯ ಅಧಿಕಾರಿಗಳು ಒಂದು ಜನರ ಗುಂಪನ್ನು ಪ್ರಚೋದಿಸಿ ಪೌಲ ಮತ್ತು ಬಾರ್ನಬರನ್ನು ಪಟ್ಟಣದಿಂದ ಹೊರ ಓಡಿಸಿದರು, ಆದರೂ ಆ ಶಿಷ್ಯರು ಹರ್ಷದಿಂದ ಮತ್ತು ಪರಿಶುದ್ಧಾತ್ಮಭರಿತರಾಗಿದ್ದರು. ಆ ಸುವಾರ್ತಿಕರು ಇಕೋನ್ಯದ ಕಡೆಗೆ ಹೋದರು.

**ಅ.ಕೃ. 14:1–7 ಓದಿರಿ: ಇಕೋನ್ಯದಲ್ಲಿ ಪೌಲ ಮತ್ತು ಬಾರ್ನಬದ ಕಾರ್ಯ ಚಟುವಟಿಕೆಗಳಿಂದಾದ ಪರಿಣಾಮವೇನು?**

_______________________________________________

_______________________________________________

ಇಕೋನ್ಯದಲ್ಲಿ ಪೌಲ ಮತ್ತು ಬಾರ್ನಬರು ಅನ್ಯಜನರಿಗೆ ಸಂದೇಶವನ್ನು ಸಾರುವ ಮುನ್ನ ಅವರು ಯೆಹೂದ್ಯರಿಗೆ ಸಾರುತ್ತಿದ್ದರು. ಅಂತಿಯೋಕ್ಯದಲ್ಲಿ ಪೌಲನ ಸಂದೇಶದಲ್ಲಿ ಯೆಹೂದ್ಯರ ಸೇವೆಯಲ್ಲಿ ಮುಖ್ಯವಾದ ಕಾರಣ ಏನೆಂಬುದನ್ನು ಹೇಳುತ್ತಾನೆ, ಇಸ್ರಾಯೇಲ್ಯರ ಆಯ್ಕೆ ಏನೆಲ್ಲ ಒಳಗೊಂಡಿತ್ತು ಮತ್ತು ದಾವೀದನ ವಂಶಾವಳಿಯಲ್ಲಿ ರಕ್ಷಕನು ಹುಟ್ಟುತ್ತಾನೆ ಎಂಬ ದೇವರ ವಾಗ್ದಾನವೂ ಆದರೂ ಅನೇಕ ಯಹೂದ್ಯರು ಗಣನೀಯವಾಗಿ ಮತಾಂತರ ಹೊಂದುವರು ಎಂಬ ಭರವಸೆಯನ್ನು ಪೌಲನು ಕಳೆದುಕೊಳ್ಳಲಿಲ್ಲ.

ರೋಮ. 9–11ರಲ್ಲಿ ಪೌಲನು ಸ್ಪಷ್ಟವಾಗಿ ಇಸ್ರಾಯೇಲ್ಯರ ವಂಶದಲ್ಲಿ ಹುಟ್ಟಿದವರೆಲ್ಲರೂ ಇಸ್ರಾಯೇಲ್ಯರಲ್ಲ ಎಂದು ಹೇಳುತ್ತಾನೆ. ಅದು ದೇವರ ಕೃಪೆಯಿಂದ ಮಾತ್ರ ಕೆಲ ಯೆಹೂದ್ಯರು ಇನ್ನೂ ನಂಬುತ್ತಾರೆ. ದೇವರು ತನ್ನ ಜನರನ್ನೂ ನಿರಾಕರಿಸಿಲ್ಲ. ಆದರೆ ದೇವರು ಕೆಲವರನ್ನು ಕೃಪೆಯಿಂದ ಆರಿಸಿಕೊಂಡಿದ್ದಾನೆ ಪೌಲನು ಅನ್ಯಜನರಿಗೆ ಸುವಾರ್ತೆ ಸಾರಲು ಮುಂದುವರಿಸಿದನು, ಆದರೂ ಒಂದು ದಿನ ಯೆಹೂದ್ಯರು ಯೇಸುವಿನ ನಂಬಿಕೆಯಲ್ಲಿ ಬರುವರು ಎಂದು ನಂಬಿದ್ದನು. ರೋಮಾ 9:11.

ಅಂತಿಯೋಕ್ಯದಲ್ಲಿ ಪರಿಸ್ಥಿತಿಯು ಅಷ್ಟೇನೂ ವ್ಯತ್ಯಾಸವಾಗಿರಲಿಲ್ಲ. ಪೌಲನ ಸುವಾರ್ತೆಗೆ ಅನ್ಯಜನರು ಮತ್ತು ಯ–ೆಹೂದ್ಯರ ಮೊದಲ ಪ್ರತಿಕ್ರಿಯೆಯು ಸಕಾರಾತ್ಮಕವಾದದ್ದಾಗಿತ್ತು. ಆದರೆ ನಂಬದೇ ಇದ್ದ ಸ್ಥಳಿಯ ಯೆಹೂದ್ಯ ಸಮುದಾಯದ ನಾಯಕರಾದ ಯೆಹೂದ್ಯರು ಅನ್ಯಜನರ ಮನ ಕಲಕಿ ಕೆಡಿಸಿ ಅಪೋಸ್ತಲರ ವಿರುದ್ಧ ಎತ್ತಿಕಟ್ಟಿದರು ಆದಕಾರಣ ಜನರು ವಿಂಗಡವಾದರು. ಎದುರಾಳಿಗಳು ಪೌಲ ಮತ್ತು ಬಾರ್ನಬರನ್ನೂ ಆಕ್ರಮಿಸಿ ಶಿಕ್ಷಿಸಬೇಕೆಂದು ಯೋಚಿಸಿದರು, ಆ ಇಬ್ಬರು ಅಪೊಸ್ತಲರು ಪಟ್ಟಣವನ್ನು ಬಿಟ್ಟು ಬೇರೊಂದು ಪಟ್ಟಣಕ್ಕೆ ಹೋಗಲು ನಿರ್ಧರಿಸಿದರು.

**ಸುವಾರ್ತೆಯನ್ನು ಕೇಳುವುದಕ್ಕೀಂತ ಹೆಚ್ಚಾಗಿ ಯೇಸುವನ್ನು ಒಪ್ಪಿಕೊಂಡು ಜನರೊಳಗೆ ಅದು ನೆಲಯೂರಿದೇನೋ ಎಂಬುದನ್ನು ಯೆಹೂದ್ಯರು ನೋಡಬೇಕೆಂದಿದ್ದರು. ನಿಮಗೆ ಯೆಹೂದ್ಯೆರ ಪರಿಚಯಯವಿದ್ದರೆ. ಅವರಿಗೆ ಯಾವ ರೀತಿ ಸಾಕ್ಷಿಗಳಾಗಿ ಬಿಂಬಿಸುತ್ತಿದ್ದೀರಿ?**

**ಗುರುವಾರ** **ಆಗಸ್ಟ್–16**

## ಲುಸ್ತ್ರ ಮತ್ತು ದರ್ಬೆ

ಪೌಲ ಮತ್ತು ಬಾರ್ನಬರು ಭೇಟಿಮಾಡಿದ ಮುಂದಿನ ಸ್ಥಳ ಲುಸ್ತ್ರ, ಅದು ಅಪ್ರಸಿದ್ಧ ಹಳ್ಳಿಯಾಗಿತ್ತು. ಆ ಹಳ್ಳಿಯು ಇಕೋನ್ಯದಿಂದ 18 ಮೈಲಿ ಇತ್ತು. ಅಲ್ಲಿ ಕೆಲ ಸಮಯ ಅವರು ಕಳೆದಿದ್ದರು ಲೂಕನು ಒಂದು ಕಥೆಯನ್ನು ಮಾತ್ರ ವರದಿ ಮಾಡಿದ್ದಾನೆ, ಅದು ಕುಂಟನನ್ನು ವಾಸಿಮಾಡಿದ ಬಗ್ಗೆ, ಆತನು ಭಿಕ್ಷುಕನಾಗಿದ್ದ, ಅವನು ಹುಟ್ಟು ಕುಂಟನಾಗಿದ್ದನು.

**ಅ.ಕೃ.14:5–19 ಓದಿರಿ: ಪೌಲನಿಗೆ ಅವರ ಪ್ರತಿಕ್ರಿಯೆ ಆ ಜನರು ಎಷ್ಟು ಅಜ್ಞಾನದಲ್ಲಿ ಮುಳುಗಿದ್ದಾರೆ ಎಂಬುದು ತಿಳಿಸುತ್ತದೆ.**

________________________________________________

________________________________________________

ಆ ಜನರ ಗುಂಪು ಆ ಅದ್ಭುತದಿಂದ ಪ್ರಭಾವಿತರಾಗಿ ಪೌಲ ಮತ್ತು ಬಾರ್ನಬರನ್ನು ದೇವರು ಎಂದು ತಿಳಿದರು. ಬಾರ್ನಬನನ್ನು ದ್ಯಾಸ್ ದೇವರೆಂತಲೂ, ಪೌಲನು ಮಾತಾಡುವದರಲ್ಲಿ ಮುಖ್ಯನಾದ್ದರಿಂದ ಅವನನ್ನು ಹೆರ್ಮದೇವರೆಂತಲೂ ಅಂದುಕೊಂಡರು. ಜನರು ಅವರಿಗೆ ಬಲಿಕೊಡಬೇಕೆಂದಿದ್ದರು.

ಲ್ಯಾಟಿನ್ ಕವಿ ಓವಿಡ್(43 ಬಿ.ಸಿ.–17/18 ಎ.ಡಿ.) ಹಿಂದೆ ಈ ಎರಡು ದೇವರುಗಳ ಬಗ್ಗೆ ಪುರಾಣವನ್ನು ಬರೆದಿದ್ದಾನೆ, ಇದೆ ದೇವರುಗಳು ಮಾನವ ರೂಪ ತಾಳಿ ಅದೇ ಪ್ರದೇಶದಲ್ಲಿ ಪಟ್ಟಣಕ್ಕೆ ಭೇಟಿ ನೀಡಿ ವಿಶ್ರಾಂತಿಗೆ ಸ್ಥಳ ಹುಡುಕುತ್ತಿದ್ದರು. ಆ ಪುರಾಣದ ಪ್ರಕಾರ ಹಿರಿಯ ಜೋಡಿಯು ಇವರಿಗೆ ಅತಿಥ್ಯ ನೀಡಿದರು. ಆದರೆ ಬೇಕಿಲ್ಲರು ಹಾಗಿರಲಿಲ್ಲ. ಆ ಹಿರಿಯ ಜೋಡಿಯು ಆತಿಥ್ಯದಿಂದಾಗಿ ಅವರ ಮನೆಯು ದೇವಸ್ಥಾನವಾಗಿ ಬದಲಾಗಿ ಅವರು ಆ ದೇವಸ್ಥಾನದಲ್ಲಿ ಪೂಜಾರಿಗಳಾದರು. ಇವರಿಬ್ಬರನ್ನು ಬಿಟ್ಟು ಪಟ್ಟಣವು ಸಂಪೂರ್ಣನಾಶವಾಯಿತು. ಅಂಥ ಕಥೇಯು ಆ ಪ್ರದೇಶದಲ್ಲಿ ಹರಿದಿದ್ದ ಕಾರಣ ಪೌಲನು ಒಂದು ಅದ್ಭುತ ಕಾರ್ಯವು ಅಲ್ಲಿಯ ಜನರಿಗೆ ಆಶ್ಚರ್ಯ ಮೂಡಿಸಲಿಲ್ಲ. ಈ ಕಥೇಯು ಆ ಸುವಾರ್ತಿಕರನ್ನು ಆ ಎರಡು ದೇವರೆಂದು ಭಾವಿಸಿದಕ್ಕೆ ವಿವರಣೆಯನ್ನು ನೀಡಲು ಸಹಾಯಕವಾಗುತ್ತದೆ. ಪೌಲ ಮತ್ತು ಬರ್ನಾಬರು ಜನರ ಸುಳ್ಳು ಆರಾಧನೆಯನ್ನು ನಿಲ್ಲಿಸಿದರು. ಕೊನೆಯಲ್ಲಿ ಕೆಲ ಅಂತಿಯೋಕ್ಯ ಮತ್ತು ಇಕೋನ್ಯಾದ ವಿರೋದಿಗಳು ಅಲ್ಲಿ ಸ್ಥಿತಿಯನ್ನು ಸಂಪೂರ್ಣವಾಗಿ ಬದಲಿಸಿದರು. ಪೌಲನನ್ನು ಕಲ್ಲು ಹೊಡೆದು ಸಾಯಿಸಲು ಪ್ರಯತ್ನಿಸಿದರು.

**ಅ.ಕೃ. 14:20–26 ಓದಿರಿ: ಪೌಲ ಮತ್ತು ಬಾರ್ನಬನು ಏಕೆ ತಮ್ಮ ಪ್ರಯಾಣವನ್ನು ಮುಗಿಸಿದರು, ಹಿಂದಿರುಗಿ ಬರುವಾಗ ಅವರು ಏನು ಮಾಡಿದರು?**

________________________________________________

**ಪೌಲನು ಹೇಳುತ್ತಾನೆ. ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯರೊಳಗೆ ಸೇರಬೇಕೆಂಬುದಾಗಿ (*ಅ.ಕೃ. 14:22*) ಇದರ ಅರ್ಥವೇನು? ನೀವು ಹೇಗೆ ಇಂಥ ಒಂದು ಪರಿಸ್ಥಿತಿಯನ್ನು ಅನುಭವಿಸಿದಿರಿ? ಬಹು ಮುಖ್ಯವಾದದೆಂದರೆ ನಿಮಗೆ ಏನೇ ಕಷ್ಟಗಳು ಬಂದರೂ ಹೇಗೆ ನಂಬಿಕೆಯಲ್ಲಿ ಕಲಿಯಬೇಕು?**

**ಶುಕ್ರವಾರ** **ಆಗಸ್ಟ್–17**

**ಹೆಚ್ಚಿನ ಅಧ್ಯಾಯನಕ್ಕಾಗಿ:** ಯೇಸುವು ಈ ಭೂಮಿಮೇಲೆ ಇದ್ದ ಸಮಯದಲ್ಲಿ ಯೆಹೂದ್ಯರನ್ನು ಅವರ ಪ್ರತ್ಯೇಕತೆಯಿಂದ ಹೊರತರಲು ಇಚ್ಚಿಸಿದನು. (ಶತಾಧಿಪತಿಯು ಮತ್ತು ಮಹಿಳೆಯ ಪರಿವರ್ತನೆಯು) ಇಸ್ರಾಯೇಲ್ ಜನರನ್ನು ಬಿಟ್ಟು ಹೊರಗೆ ಶತಾಧಿಪತಿಯ ಯೇಸು ಮಾಡಿದ ಎರಡು ಕಾರ್ಯಗಳು. ಈಗ ಅನ್ಯಜನರ ಮಧ್ಯದಲ್ಲಿ ಕೆಲಸ ಮಾಡುವ ಸಮಯ ಬಂದಿದೆ.; ಈ ಸಮುದಾಯದ ಜನರು ಸುವಾರ್ತೆಯನ್ನು ಸಂತೋಷವಾಗಿ ಸ್ವೀಕರಿಸುತ್ತಿದ್ದರು. ಜ್ಞಾನಯುತ ನಂಬಿಕೆಯ ಬೆಳಕಿನಿಂದಾಗಿ ಅವರು ದೇವರನ್ನು ಮಹಿಮೆಪಡಿಸಿದರು. ಯೆಹೂದ್ಯರ ಅಪನಂಬಿಕೆಯು ಮತ್ತು ಅವರು ಮಾಡುವ ತೊಂದರೆಯು ದೇವರ ಉದ್ದೇಶವನ್ನು ದೂರಮಾಡಲಿಲ್ಲ, ಏಕೆಂದರೆ ಹೊಸ ಇಸ್ರಾಯೇಲು ಹಳೆಯ ಆಲಿವ್

ವೃಕ್ಷಕ್ಕೆ ಕಸಿಯಾಗಿತ್ತು. ಅಪೊಸ್ತಲರಿಗೆ ಸಭಾಮಂದಿರಗಳು ಮುಚ್ಚಿದವು. ಆದರೆ ಖಾಸಗಿ ಮನೆಗಳು ಮತ್ತು ಅನ್ಯಜನರ ಸಮುದಾಯ ಭವನಗಳು ದೇವರ ವಾಕ್ಯವನ್ನು ಸಾರಲು ಅಪೊಸ್ತಲರಿಗೆ ತೆರೆದಿದ್ದವು. ಎಲೆನ್.ಜಿ.ವೈಟ್. *"ಸ್ಕೆಚ್ಸ್ ಫ್ರಮ್ ದಿ ಲೈಫ್ ಆಫ್ ಪಾಲ್"*.

ಅವರ ಎಲ್ಲ ಸುವಾರ್ತೆಯ ಕೆಲಸಗಳಲ್ಲಿ ಪೌಲ ಮತ್ತು ಬಾರ್ನಬರು ಯೇಸುವನ್ನು ಹಿಂಬಾಲಿಸಿದರು. ಉದಾಃ ಸ್ವಇಚ್ಛೆಯಿಂದ ತ್ಯಾಗಮಾಡುವುದು ಮತ್ತು ನಂಬಿಕೆಯಿಂದ ಆತ್ಮಗಳನ್ನು ಗೆಲ್ಲುವ ಕೆಲಸ ಮಾಡಿದರು. ಉತ್ಸಾಹದಿಂದ ಮತ್ತು ಕಷ್ಟಪಟ್ಟು ಕೆಲಸ ಮಾಡಿದರು. ಅವರು ವೈಯುಕ್ತವಾಗಿ ಯಾವುದನ್ನು ಸುಲಭಮಾಡಿಕೊಳ್ಳಲಿಲ್ಲ. ಆದರೆ ಪ್ರಾರ್ಥನೆಯ ಮೂಲಕ ಸತತವಾಗಿ ಕೆಲಸ ಮಾಡಿ ಸತ್ಯತೆಯ ಬೀಜ ಬಿತ್ತಿದರು. ಬೀಜ ಬಿತ್ತುವದಲ್ಲದೆ ಅಪೊಸ್ತಲರು ಬಹಳ ಎಚ್ಚರಿಕೆಯಿಂದ ಸುವಾರ್ತೆಗೆ ಸ್ಥಿರವಾಗಿ ನಿಂತರವರಿಗೆ ದೇವರ ಭಯಭಕ್ತಿಯು ಸುವಾರ್ತಾ ಸಂದೇಶಗಳಾಗಿ ಪ್ರಾಮುಖ್ಯತೆಯು ಹೊಸ ಶಿಷ್ಯರಲ್ಲಿ ಮನಸ್ಸಿನ ಮೇಲೆ ಎಂದೂ ಅಳಿಯದ ಪ್ರಭಾವವನ್ನು ಬಿರಿದವು. ಎಲೆನ್.ಜಿ.ವೈಟ್. *"ದಿ ಆಕ್ಟ್ಸ್ ಆಫ್ ದಿ ಅಪೊಸ್ಟಲ್ಸ್"*.

**ಚರ್ಚೆಯ ಪ್ರಶ್ನೆಗಳು:**

1. ಯೋಹಾನ ಮತ್ತು ಮಾರ್ಕನಿಗೆ ಕಷ್ಟ ಎದುರಾದಾಗ ಹೇಗೆ ಓಡಿಹೋದರು ಎಂಬ ಈ ಕಥೆಯನ್ನು ಆಳವಾಗಿ ನೋಡಿ. ಪೌಲ ಮತ್ತು ಬಾರ್ನಬರು ನಂತರ ಯೋಹಾನ ಮತ್ತು ಮಾರ್ಕನ ವಿಷಯವಾಗಿ ವಾಗ್ವಾದ ಮಾಡಿದರು. ಬಾರ್ನಬನು ಮಾರ್ಕನನ್ನು ಸುವಾರ್ತೆ ಕಾರ್ಯಕ್ಕೆ ಉಪಯೋಗಿಸಲು ಯೋಚಿಸಿದಾಗ ಪೌಲನು ಉಪಯೋಗಿಸಲು ಇಷ್ಟಪಡಲಿಲ್ಲ. (ಅ.ಕೃ.15:37) ಕೆಲ ವರ್ಷಗಳ ನಂತರ ಮಾರ್ಕನನ್ನು ನಿನ್ನ ಸಂಗಡ ಕರೆದುಕೊಂಡು ಬಾ ಅವನು ಸುವಾರ್ತಾ ಸೇವೆಗೆ ಉಪಯುಕ್ತವಾಗಿದ್ದಾನೆ ಎಂದು ಬರೆದಿದ್ದಾನೆ. ಕೆಲವರು ಕೆಲವು ಸಂದರ್ಭಗಳಲ್ಲಿ ಅಪನಂಬಿಗಸ್ತರಾಗುತ್ತಾರೆ ಇಂಥವರಿಂದ ಯಾವ ಪಾಠಗಳು ನಮಗೆ ಸಿಗುತ್ತವೆ?

2. ಲುಸ್ತ್ರ ಪಟ್ಟಣದವರು ಪೌಲ ಮತ್ತು ಬಾರ್ನಬರನ್ನು ದೇವರೆಂದು ತಪ್ಪು ತಿಳಿದುಕೊಂಡಿದ್ದರಿಂದ ಪೌಲ ಮತ್ತು ಬಾರ್ನಬರ ಪ್ರತಿಕ್ರಿಯನ್ನು ಪುನರಾಲೋಚನೆ ಮಾಡಿರಿ. (ಅ.ಕೃ.14:14,18) ದೇವರು ಮಾಡಿದ ಕಾರ್ಯಕ್ಕಾಗಿ ನಾವು ಅದರ ಪ್ರಶಂಸೆಯನ್ನು ನಾವು ತೆಗೆದುಕೊಳಬೇಕೆಂಬ ಶೋಧನೆ ಬಂದಾಗ ನಾವು ಹೇಗೆ ಪ್ರತಿಕ್ರಯಿಸಬೇಕು?

3. ಅ.ಕೃ.14:21–23 ಓದಿರಿ: ಪೌಲ ಮತ್ತು ಬಾರ್ನಬರ ಉದಾಹರಣೆ ಆಧಾರವು ವೈಯಕ್ತವಾಗಿ ಮತ್ತು ಸಭೆಯಾಗಿ ಹೊಸದಾಗಿ ಮತಾಂತರ ಹೊಂದಿದವರ ನಂಬಿಕೆಯನ್ನು ಹೇಗೆ ಪೋಷಿಸಿ ಬಲ ಪಡಿಸಬೇಕು?

4. ಧಾರ್ಮಿಕ ನಾಯಕರು ಪೌಲನನ್ನು ವಿರೋಧಿಸಿದ ಹಾಗೆ ಬಹು ಕಾಲದಿಂದ ಇದ್ದ ಮಾನವ ಸಂಪ್ರದಾಯ ಮತ್ತು ನಂಬಿಕೆಯು ಸತ್ಯದ ಹಾದಿಗೆ ಅಡ್ಡಬಾರದಂತೆ ನೋಡಿಕೊಂಡು ಹೇಗೆ ಖಚಿತ ಪಡಿಸಿಕೊಳ್ಳಬೇಕು?